

## ಹೊಸ ಅರಿವಿಗೆ ಟ್ರೆಕ್ಕಿಂಗ್

ದಿನೇಶ್ ಹೊಳ್ಳ ಬರೆದಿರುವ ಮುಖಪುಟ ಲೇಖನ 'ಟಿಕ್ ಟಿಕ್ ಟಿಕ್ ಇದು ಟ್ರೆಕ್ಕಿಂಗ್ ಕಾಲ' (ಡಿ.03) ಚೆನ್ನಾಗಿತ್ತು. ಪ್ರತಿ ಸಾಲಿನಲ್ಲಿಯೂ ಅವರು ಪ್ರಕೃತಿಯ ಕುರಿತು ಇರಿಸಿಕೊಂಡಿರುವ ಕಾಳಜಿ, ಪ್ರೀತಿ, ಗೌರವ, ಭಕ್ತಿಗಳು ವ್ಯಕ್ತವಾಗುತ್ತಿದ್ದವು. ಕಾಸಿದೆ, ಟೈಮ್ ಪಾಸ್, ಮಸ್ತಿ, ಸೆಲ್ಫಿಗೆ ಟ್ರೆಕ್ಕಿಂಗ್ ಮಾಡುತ್ತೇನೆ ಅಂದುಕೊಂಡವರು ಈ ಲೇಖನದ ಆಶಯವನ್ನು ಅರಿತು ಅನುಸರಿಸಲಿ. ಇಲ್ಲದಿದ್ದರೆ ತೇಜಸ್ವಿಯವರ ಮಾತಿನಂತೆ 'ನಮ್ಮ ಪಾಲಿಗೆ ಭೂಮಿ ಹಾಳಾಗುತ್ತದೆಯೇ ಹೊರತು ಆದರ ಪಾಲಿಗಲ್ಲ'.

—ಜಗನ್ನಾಥ ರೈ, ಮೂಡುಬಿದಿರೆ

ಚಾರಣದ ಕುರಿತ ಪರಿಪೂರ್ಣ ಲೇಖನ. ಓದುವಷ್ಟು ಕಾಲ ಪರಿಸರದಲ್ಲಿ ಕಳೆದುಹೋದ ಅನುಭವ ನೀಡಿತು. ದಿನೇಶ್ ಹೊಳ್ಳ ಅವರು ಕನ್ನಡ ಭಾಷೆಯಲ್ಲಿ ಪ್ರಕೃತಿ ವರ್ಣನೆ ಮಾಡುವ ಪರಿ ಅನನ್ಯ.

—ಕೆ.ವಿ. ಶಶಿಧರ್, ಬೆಂಗಳೂರು

ಲೇಖನವನ್ನು ಓದಿದಾಗ 18 ವರ್ಷಗಳ ಹಳೆಯ ನೆನಪು ಮರುಕಳಿಸಿತು. ನಾವು ಜಿ.ಟಿ.ಆರ್.ಇ (ಡಿ.ಆರ್.ಡಿ.ಓ) ಸಂಸ್ಥೆಯ ಸಹೋದ್ಯೋಗಿಗಳು ಆಗಾಗ ಚಾರಣ ಮಾಡುತ್ತಿದ್ದವು. ನಮ್ಮ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿದಿದ್ದು ರೈಲ್ವೆ ಹಳಿಗಳನ್ನು ನಿರ್ಮಿಸುತ್ತಿದ್ದಾಗ ಮಾಡಿದ ಯಡಕುಮೇರಿಯ ಚಾರಣ. ಆ ಚಾರಣದಲ್ಲಿ ಎತ್ತರದ ಸೇತುವೆಯ ಮೇಲಿರುವ ಹಳಿಗಳನ್ನು ದಾಟುತ್ತಿದ್ದಾಗ ನಡುಗುತ್ತಿದ್ದ ಕಾಲುಗಳು ಮತ್ತು ಚಾರಣದಲ್ಲಿ ಗೆಳೆಯ ಎಸ್. ಗೌರಿಶಂಕರ ಕಾಲು ಮುರಿದುಕೊಂಡು ಕಾಡಿನಿಂದ ರಸ್ತೆಗೆ ತಲುಪಲು ಪಟ್ಟ ಕಷ್ಟ ಮತ್ತೊಮ್ಮೆ ನೆನಪಾಯಿತು.

—ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

## ನಾಮಿನಿ: ಉಪಯುಕ್ತ ಬರಹ

ಎಚ್.ಎಸ್. ಶ್ರೀಮತಿ ಅವರ 'ಬ್ಯಾಂಕ್ ಖಾತೆಗೆ ನಾಮಿನಿ ಇದ್ದಾರೆ ತಾನೇ?' (ಡಿ. 3) ಲೇಖನ ಬಹು ಉಪಯುಕ್ತವಾಗಿದೆ. ನಾನು ಬ್ಯಾಂಕ್ ಅಧಿಕಾರಿಯಾಗಿ, ನಾಮಿನಿ ಇಲ್ಲದೆ ವಾರಸುದಾರರು ಬ್ಯಾಂಕಿನ ಖಾತೆಗಳಲ್ಲಿರುವ ಹಣ ಹಿಂಪಡೆಯಲು ಪಡುವ ತೊಂದರೆಗಳನ್ನು ನೋಡಿದ್ದೇನೆ. ಪ್ರಸ್ತುತ ಹೊಸ ಖಾತೆಗಳಲ್ಲಿ ಕಡ್ಡಾಯವಾಗಿ ನಾಮಿನಿ ಮಾಡಿಸುತ್ತಿದ್ದೇವೆ.

—ವಾಣಿ ಎಂ.ಜಿ., ಬೆಂಗಳೂರು

ಪ್ರತಿಯೊಬ್ಬರೂ ಅವಶ್ಯವಾಗಿ ತಿಳಿದಿರಬೇಕಾದ ಮಾಹಿತಿ. ಈ ಕಾಲದಲ್ಲಿ ಕೈ ಬಿಸಿ ಮಾಡದೆ ಯಾವ ಕೆಲಸವೂ ಆಗುವುದಿಲ್ಲ.

—ವಿಜಯ ಪ್ರಸಾದ್, ಬೆಂಗಳೂರು

ಠೇವಣಿ ಮಾಡಿದ ನಂತರ ಅದರ ಮೂಲಕ ಬರುವ ಪ್ರತಿಫಲವನ್ನು ಜೀವನಪೂರ್ತಿ ಅನುಭವಿಸಲು ಎಷ್ಟರಮಟ್ಟಿಗಿನ ಎಚ್ಚರಿಕೆಯನ್ನು ತೆಗೆದುಕೊಳ್ಳಬಹುದೋ, ಅಷ್ಟೇ ಮಟ್ಟಿಗೆ ಮುಂದೆ ಮಾಡಬಹುದಾದ ಅಥವ ಈಗಾಗಲೇ ಹೊಂದಿರುವ ಎಲ್ಲಾ ಠೇವಣಿಗಳಿಗೂ ನಾಮನಿರ್ದೇಶನವನ್ನು ತಪ್ಪದೆ ಅತ್ಯಗತ್ಯವಾಗಿ ಮಾಡಬೇಕು. ಇಲ್ಲದಿದ್ದರೆ ಠೇವಣಿದಾರರ ನಿಧನಾನಂತರ ಅವರ ವಾರಸುದಾರರು ಹಣವನ್ನು ಹಿಂಪಡೆಯಲು ಹರಸಾಹಸ ಪಡಬೇಕಾಗುತ್ತದೆ.

—ಎನ್. ಆನಂದ ರಾಮರಾವ್

ಲೇಖನ ಸಮಯೋಚಿತವಾಗಿದೆ. ಬ್ಯಾಂಕ್ ಖಾತೆ ಒಂದೇ ಅಲ್ಲ, ಇತರೆ ಎಲ್ಲಾ ಖಾತೆಗಳಿಗೂ (ಉದಾ: ಪಿಂಚಣಿ ಖಾತೆ, ಅಂಚೆ ಇಲಾಖೆ ಖಾತೆ) ನಾಮಿನಿ ಮಾಡಿಸುವುದು ಅವಶ್ಯ. ಬಹಳಷ್ಟು ಜನರಿಗೆ ಇದರ ಅರಿವು ಇರುವುದಿಲ್ಲ. ಈ ನಿಟ್ಟಿನಲ್ಲಿ ಸರಕಾರಗಳು, ಆರ್‌ಬಿಐ ಕ್ರಮ ಕೈಗೊಳ್ಳಬೇಕು.

—ಶಾಂತವೀರ ಎಸ್., ಚಿತ್ರದುರ್ಗ

## ಸದಾಶಯದ ಕಥೆಗಳು ಅಗತ್ಯ

ಎಳೆಯರ ಅಂಗಳ ಪುಟದಲ್ಲಿನ ಮಂಜುಳ ಶ್ರೀಧರ್ ಶಾಸ್ತ್ರಿ ಅವರ 'ಬೊಂಬಾಟ್ ಬೋಂಡ' (ಡಿ. 3) ಕಥೆಯ ಆಶಯ ಇಷ್ಟವಾಗಲಿಲ್ಲ. ಮಕ್ಕಳ ಆಸೆಯನ್ನು ಪೂರೈಸಲು, ಜಾಣ ಉಪಾಯದಿಂದ, ಮಗನೊಂದಿಗೆ ಹೋಗಿ ಸಾಮಾನನ್ನು ತಂದು, ದೀಪಾವಳಿ ಹಬ್ಬದಲ್ಲಿ ಬೋಂಡಾ ಮಾಡೆಂದು ಹೇಳುವ ತಂದೆಯ ಕಥೆ, ಮಕ್ಕಳಲ್ಲಿ ಇತರರಿಗೆ ಮೋಸಮಾಡಿ ಬದುಕುವ ಗುಣವನ್ನು ಹುಟ್ಟುಹಾಕಬಲ್ಲದು. ಮಕ್ಕಳಲ್ಲಿ ನೈತಿಕತೆಯನ್ನು ಬಿತ್ತುವ ಕತೆಗಳು ಉತ್ತಮ.

—ಸತ್ಯವತಿ, ಕುಳಿಹಿತ್ತಲು, ಚಿಕ್ಕಮಗಳೂರು

## ಉಪಯುಕ್ತ ಲೇಖನ.

ಡಾ. ವೀಣಾ ಭಟ್ ಅವರ 'ಗರ್ಭಿಣಿ ಮಹಿಳೆಯರ ಆಹಾರ' ಕುರಿತ ಬರಹ (ಡಿ. 3) ಚೆನ್ನಾಗಿದೆ. ಆಹಾರದ ಜೊತೆಗೆ ವಿಹಾರ ಹೇಗಿರಬೇಕೆಂದು ತಿಳಿಸಿದ್ದರೆ ಇನ್ನೂ ಅನುಕೂಲವಾಗುತ್ತಿತ್ತು.

—ಅನಸೂಯ ತ್ರಿವಿಕ್ರಮ್ ಕೇದಿಗೆಮನೆ

ವಸುಂಧರಾ ಕದಲೂರರ 'ಸ್ವಗತ' ಕಥೆ ಬಹಳ ಚೆನ್ನಾಗಿದೆ (ಡಿ. 3). ರಾಮಾಯಣ ಮಹಾಕಾವ್ಯದ ಸಣ್ಣ ಪ್ರಸಂಗವನ್ನು ಕಥೆಯನ್ನಾಗಿಸಿ ಸುಂದರವಾಗಿ ಬರೆದಿದ್ದಾರೆ.

—ನರಸಿಂಹಾರೆಡ್ಡಿ ಯಂಕಮೋಳ, ಸೇಡಂ

## 'ನುಡಿ ಕನ್ನಡಿ' ನಿರಂತರವಾಗಿರಲಿ

ನವೆಂಬರ್ ತಿಂಗಳ ನಾಲ್ಕೂ ಸಂಚಿಕೆಗಳಲ್ಲಿ 'ಸುಧಾ'ದಲ್ಲಿ ಪ್ರಕಟವಾದ ಕನ್ನಡ ನಾಡು–ನುಡಿಯ ಬಗೆಗಿನ ಲೇಖನಗಳು ಅಮೋಘವಾಗಿದ್ದವು. ಈ ಮಾಲಿಕೆಯನ್ನು ಪ್ರತಿ ವಾರ ಮುಂದುವರಿಸಬೇಕೆಂದು ವಿನಂತಿ. ಕನ್ನಡದ ಬಗೆಗಿನ ಮಾಹಿತಿ ಹೊಸತಲೆಮಾರಿಗೆ ಸಾಕಷ್ಟು ಬೇಕಾಗಿದೆ.

—ಕವನಾ ಆರ್.



## ಜನಕವಿ ಐರಸಂಗ

ಕವಿ ಐರಸಂಗರ ಬಗ್ಗೆ ಬಸು ಬೇವಿನಗಿಡದ (ಡಿ. 3) ಅವರ ಲೇಖನ ಚೆನ್ನಾಗಿತ್ತು. ಐರಸಂಗರ ಕವನದ ಸಾಲುಗಳನ್ನು ಉಲ್ಲೇಖಿಸಿದ್ದರೆ ಚೆನ್ನಾಗಿತ್ತು.

—ಹರೀಶ್ ಗಂಗಪ್ಪ

ಐರಸಂಗ ಅವರ ಅಗಲಿಕೆ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವೇ. ಕವಿಯ ಬದುಕು–ಸಾಧನೆಯ ಸ್ಮರಣೆ ಅರ್ಥಪೂರ್ಣವಾಗಿದೆ.

—ರಾಜೀವ್ ಎನ್. ಮಾಗಲ್, ಹಾಸನ

ಅಬ್ಬಾ! ಅದ್ಭುತ! 91ನೇ ವಯಸ್ಸಿನಲ್ಲಿ ಸೈಕಲ್ ಏರಿ ಸಾಹಿತ್ಯದ ರಸದೌತಣ ನೀಡುತ್ತಿದ್ದ ಜನಕವಿ ಐರಸಂಗ ಅವರ ಕಿರುಪರಿಚಯ ನಂದಾದೀಪವೇ ಸರಿ. ಸರಳ ಸಜ್ಜನ ಐರಸಂಗ ಸಾಹಿತ್ಯಕ್ಕೆ ಜೋತುಬಿದ್ದು, ತಾಳ–ಲಯಕ್ಕೆ ಸೋತಿದ್ದು ಇತಿಹಾಸವಾಗಿ, ಈಜು, ಮಲ್ಲಕಂಬ ಆಟದ ಬಗ್ಗೆ ತಿಳಿದಿದ್ದು ಸಂತೋಷದ ಜೊತೆಗೆ ಆಶ್ಚರ್ಯವಾಯಿತು. ಜನ ಭಾಷೆಯ ಕವಿ ಸಾಹಿತ್ಯ ಲೋಕದ ನಕ್ಷತ್ರ ಆಗಲಿಲ್ಲ ಎಂಬುದೇ ಕೊರಗು.

—ಕೆ. ಹೊನ್ನಪ್ಪ, ತುಮಕೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in